ವ್ಯಾಪಕ ಸಾಕ್ಷರ ಯೋಜನೆಯ ಅತ್ಯಗತ್ಯ ಆಧಾರ ಸ್ತಂಭಗಳು

ಶಕ್ತಿಬ್ರತಾ ಸೇನ್ ಮತ್ತು ನಿಧಿ ವಿನಾಯಕ್

ಅಕ್ಷರಜ್ಞಾನದ ಮೂರು ಸ್ತಂಭಗಳು

ವಾಚಿಕ, ಕಾಗುಣಿತದ ಪರಿಣತಿ[1] ಮತ್ತು ವೈವಿಧ್ಯಮಯ ಬರಹಗಳಿಗೆ ತೆರೆದುಕೊಳ್ಳುವುದು – ಇವೆಲ್ಲವೂ ಸೇರಿ ಮಕ್ಕಳಿಗೆ ವ್ಯಾಪಕ ಅಕ್ಷರಜ್ಞಾನದ ಅನುಭವವನ್ನು ನೀಡುತ್ತವೆ. ಈ ಮೂರು ಸ್ತಂಭಗಳು ಒಂದರ ನಂತರ ಒಂದು ಬರುವುದು ಇಲ್ಲವೇ ಒಂದೊಂದೇ ಕಾರಣಕರ್ತವೂ ಅಲ್ಲ. ನಿಜವಾಗಿ ನೋಡಿದರೆ ಅವುಗಳು ಒಂದರೊಳಗೊಂದು ಸುರುಳಿಯಾಗಿ ಬೆಸೆದುಕೊಂಡಿದ್ದು ಓದಲು ಆರಂಭಿಸಿದಾಗ ಮತ್ತು ಈ ಎಲ್ಲವನ್ನೂ ಒಟ್ಟಿಗೆ ಅನುಭವಿಸಿದಾಗ ಮಾತ್ರ ಅವರು ಪ್ರೇರಿತರೂ, ತಾವೇ ಸ್ವತಂತ್ರವಾಗಿ ಓದಲು ಶಕ್ಯರೂ ಆಗುತ್ತಾರೆ.

ಓದಲು ಕಲಿಯುವ ಮಗುವಿನ ಪ್ರಯತ್ನದಲ್ಲಿ ಭಾಷೆಗಳು ಪ್ರಮುಖ ಪಾತ್ರ ವಹಿಸುತ್ತವೆ ಹಾಗೂ ಅದು ಮಗುವು ಅರ್ಥಗಳನ್ನು ಕಟ್ಟಿಕೊಳ್ಳಲು, ಜಗತ್ತಿನ ಬಗ್ಗೆ ತಿಳಿದುಕೊಳ್ಳಲು ಮತ್ತು ಬದುಕಿನ ಅನುಭವಗಳ ಜೊತೆ ಹೊಂದಿಕೊಳ್ಳಲು ಸಹಾಯ ಮಾಡುತ್ತದೆ. ಮಗುವಿಗೆ ಭಾಷೆಯು ಚಿಂತನೆಗೆ ದಾರಿಯಾಗುವುದರಿಂದ ಅಕ್ಷರಜ್ಞಾನಕ್ಕೆ ಮೌಖಿಕತೆಯು ಒಂದು ಪೂರ್ವಾಪೇಕ್ಷಿತ ಸಾಮಗ್ರಿಯಾಗುತ್ತದೆ.

ಇದರೊಟ್ಟಿಗೆ ನಾವು **ಭಾರತದ ಬಹುಭಾಷೆಯ ವಾಸ್ತವತೆಯನ್ನೂ** (India's multilingual reality) ಅರಿತು ಒಪ್ಪಿಕೊಳ್ಳಬೇಕಿದೆ. ಪ್ರತಿಯೊಬ್ಬ ಭಾರತೀಯನು ಮೌಖಿಕ ಉಕ್ತಿಗಳ ಪ್ರಪಂಚದಲ್ಲಿ ಬಹುಭಾಷಿಕನೇ ಆಗಿರುತ್ತಾನೆ. ಬಹುತೇಕ ಮಕ್ಕಳು, ಅವರು ಬೆಳೆದು ಸುತ್ತಲಿನ ಪ್ರಪಂಚದೊಡನೆ ಸಂವಹನ ನಡೆಸುತ್ತಿರುವಾಗ, ಒಂದಲ್ಲಾ ಒಂದು ರೀತಿಯಲ್ಲಿ ವಿಶಿಷ್ಟ ಭಾಷಿಕ ಪ್ರವಾಹಕ್ಕೆ ತೆರೆದುಕೊಳ್ಳುತ್ತಾರೆ. ಮಕ್ಕಳಿಗೆ ಅಕ್ಷರಜ್ಞಾನದ ಭದ್ರಬುನಾದಿಯನ್ನು ನಿರ್ಮಿಸುವ ಸಲುವಾಗಿ ತರಗತಿಗಳಲ್ಲಿ ಮಕ್ಕಳ ಭಾಷೆ ಮತ್ತು ಮಾತುಗಳಿಗೆ ಸಾಕಷ್ಟು ಮುಕ್ತ ಅವಕಾಶವನ್ನು ಸೃಷ್ಟಿಸಬೇಕಾಗುತ್ತದೆ. ಮೌಖಿಕ ಭಾಷೆಯ ಬೆಳವಣಿಗೆ ಮತ್ತು ಕಾಗುಣಿತದ ಅರಿವು ಬೆಳೆಯಲು ಇರುವ ಅವಕಾಶಗಳೊಡನೆ, ವಿಭಿನ್ನ ಅರ್ಥಪೂರ್ಣ ಪಠ್ಯಗಳಿಗೂ ಮಕ್ಕಳು ತೆರೆದುಕೊಳ್ಳುವುದು ಕೂಡಾ ಮುಖ್ಯ. ಮಿಠಾಯಿ ಮೇಲಿನ ಗೋಡಂಬಿಯಂತೆ ಪುಸ್ತಕಗಳೆಂದರೆ 'ಇದ್ದರೆ ಉತ್ತಮ' ಎಂಬ ರೀತಿ ನೋಡಲಾಗುತ್ತದೆಯೇ ಹೊರತು ಸಂಪೂರ್ಣ ಅಕ್ಷರಜ್ಞಾನದ ಅನುಭವಕ್ಕೆ ಇದು 'ಇರಲೇ ಬೇಕಾದದ್ದು' ಎಂಬಂತೆ ನೋಡದಿರುವುದು ಬೇಸರದ ಸಂಗತಿ. ಕೇವಲ ಆಳವಾದ ಅರ್ಥಗ್ರಹಿಕೆಯ ಕಲಿಕೆಗಷ್ಟೇ ಅಲ್ಲದೇ ಸುಲಲಿತ ಓದನ್ನು ಕಲಿಯಲೂ ಕೂಡ ಹಲವಾರು ರೀತಿಯ ಪುಸ್ತಕಗಳಿಗೆ ಒಡ್ಡಿಕೊಳ್ಳುವುದು ಅತ್ಯಗತ್ಯ.

ತರಗತಿಯ ಅಭ್ಯಾಸಗಳಲ್ಲಿ ಅಕ್ಷರಜ್ಞಾನದ ಮೂರು ಆಧಾರಸ್ತಂಭಗಳು

ಅಕ್ಷರಜ್ಞಾನದ ಈ ಮೂರು ಆಧಾರಸ್ತಂಭಗಳನ್ನು ಸರಿಯಾಗಿ ಅರಿತುಕೊಳ್ಳಬೇಕು, ಪುನರ್ ರಚಿಸಬೇಕಿದ್ದು, ತರಗತಿ ಕೊಠಡಿಗೂ ಇವನ್ನು ಕೊಂಡೊಯ್ಯಬೇಕು. ಹೀಗೆ ಮಾಡಲು ಅಗತ್ಯವಾದ ಕೆಲವು ಹಂತಗಳು ಈ ಕೆಳಕಂಡಂತಿವೆ.

ಮೌಖಿಕ ಭಾಷೆಯ ಪರಿಣಾಮಕಾರಿ ವ್ಯಾಯಾಮಗಳು:

ಇವು ಮಕ್ಕಳನ್ನು ತಾರ್ಕಿಕವಾಗಿ ಚಿಂತಿಸುವಂತೆ ಹಾಗೂ ತಾವು ತರಗತಿಯೊಳಗೆ ಬರುವಾಗ ಹೊತ್ತು ತರುವ ತಮ್ಮ ಮಾತಿನ ಭಂಡಾರವನ್ನು ಬೆಳೆಸಿಕೊಳ್ಳುವಂತೆ ಸಹಾಯಮಾಡುತ್ತದೆ. ತಮ್ಮ ಸ್ಥಳೀಯ ಭಾಷೆ ಮತ್ತು ಶಾಲೆಯಲ್ಲಿನ ಭಾಷೆಗಳ ನಡುವಿನ ತಡೆಯನ್ನು ದಾಟಲು ಅವರಿಗೆ ಸಹಾಯಮಾಡುತ್ತದೆ.

ಒಂದು ಕಥೆಯ ಸುತ್ತ ಚರ್ಚೆ: ಒಂದು ಕಥೆಯನ್ನು ಓದುವ ಮುನ್ನ, ಓದುತ್ತಿರುವಾಗ ಹಾಗೂ ಓದಿದ ನಂತರ ಈ ಮೂರು ಹಂತಗಳಲ್ಲಿ ಕಥೆಯೊಡನೆ ತೊಡಗಿಕೊಳ್ಳುವಂತೆ ಮಕ್ಕಳನ್ನು ಉತ್ತೇಜಿಸಬೇಕು. ಕಥೆಯನ್ನು ಓದುವ ಮುನ್ನ, ಚಿತ್ರಗಳ ಸುಳಿವುಗಳು, ಕಥೆಯ ಶೀರ್ಷಿಕೆ ಇತ್ಯಾದಿಗಳ ಮೂಲಕ ಕಥೆ ಯಾವುದಿರಬಹುದು ಎಂದು ಮಕ್ಕಳು ಊಹಿಸುವಂತೆ ಉತ್ತೇಜಿಸಬಹುದು. ಕಥೆಯನ್ನು ಓದುತ್ತಿರುವಾಗ ಒಂದು ಆಸಕ್ತಿಕರ ಘಟ್ಟದಲ್ಲಿ ಕಥೆಯನ್ನು ನಿಲ್ಲಿಸಿ, 'ಮುಂದೆ ಏನಾಗಬಹುದೆಂದು ನಿಮಗನ್ನಿಸುತ್ತದೆ?' ಎಂಬಂಥ ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳೇ ಹೆಚ್ಚಾಗಿ ಊಹಿಸಿ ಹೇಳುವಂತೆ ಅವಕಾಶ ನೀಡಬಹುದು. ಕಥೆಯನ್ನು ಓದಿದ ನಂತರ ತಮ್ಮದೇ ಮಾತುಗಳಲ್ಲಿ ಈ ಕತೆಯನ್ನು ಮತ್ತೆ ಹೇಳಲು, ಕಥೆಯ ಪಾತ್ರಗಳು ಏನು ಅನುಭವಿಸಿದವು ಎಂದು ಯೋಚಿಸಲು, ಕಥೆಯನ್ನು ವಿಸ್ತರಿಸಲು, ಕೆಲವು ಘಟನೆಗಳ ಬದಲಾವಣೆ–ಗಳೊಂದಿಗೆ ಕಥೆಯನ್ನು ಬೇರೆಯ ರೀತಿಯಲ್ಲಿ ಬರೆಯಲು ಮಕ್ಕಳಿಗೆ ಹೇಳುವುದು ಇತ್ಯಾದಿ. ಇಂತಹ ಓದಿನ ನಂತರದ ಚಟುವಟಿಕೆಗಳನ್ನು ಬರಹದ ಮೂಲಕವೂ ಗಟ್ಟಿಗೊಳಿಸಬಹುದು.

ಚಿತ್ರಗಳ ಸುತ್ತ ಸಂವಾದ:– ದಿನಪತ್ರಿಕೆಗಳು, ನಿಯತಕಾಲಿಕೆಗಳು, ಪಠ್ಯಪುಸ್ತಕಗಳು ಇತ್ಯಾದಿ ಸೇರಿದಂತೆ ಎಲ್ಲೆಡೆ ದೊರಕುವ ಚಿತ್ರಗಳನ್ನು ತೆಗೆದುಕೊಂಡು ಮಕ್ಕಳನ್ನು ಸೃಜನಾತ್ಮಕವಾಗಿ ಆಲೋಚಿಸಲು, ಒಂದು ಕಥೆಯನ್ನು ಕಟ್ಟಲು, ಪದಸಂಪತ್ತನ್ನು ಹೆಚ್ಚಿಸಿಕೊಳ್ಳಲು ಮತ್ತು ಸಂವಾದದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಸಹಾಯ ಮಾಡಬಹುದು. ಸಂವಾದದ ಸಮಯದಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳುವ ಮೂಲಕ ಇದನ್ನು ಸಾಧ್ಯವಾಗಿಸಬಹುದು: ಇಲ್ಲಿ ಏನಾಗುತ್ತಿದೆ ಎಂದು ನೀನು ಭಾವಿಸುತ್ತೀಯ? ಈ ಪಾತ್ರವು ಈ ಚಟುವಟಿಕೆಯನ್ನು ಏಕೆ ಮಾಡುತ್ತಿದೆ? ಇದರ ನಂತರ ಅವರು ಎಲ್ಲಿಗೆ ಹೋಗುತ್ತಾರೆ ಎಂದು ನಿನಗನ್ನಿಸುತ್ತದೆ? ಈ ಎರಡು ಪಾತ್ರಗಳು ಯಾವುದರ ಬಗ್ಗೆ ಮಾತಾಡುತ್ತಿದೆ ಎಂದು ನಿನ್ನ ಅಭಿಪ್ರಾಯ?

ಮುಕ್ತ ಚರ್ಚೆಗಳು: ಮಕ್ಕಳು ತಮ್ಮ ದೈನಂದಿನ ಜೀವನದ ಅನುಭವಗಳ ಬಗ್ಗೆ, ತಮ್ಮ ಭವಿಷ್ಯದ ಬಗ್ಗೆ, ಅವರ ಚಿಂತನೆಯ ಬಗ್ಗೆ ಮಾತನಾಡಲು ಇಷ್ಟಪಡುತ್ತಾರೆ. ಹಾಗಾಗಿ, ಶಿಕ್ಷಕರಿಗೆ ಮಕ್ಕಳ ಜೊತೆ

ಸಂವಾದ ನಡೆಸಲು ಇರುವ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುವುದು ಅತ್ಯಂತ ಮುಖ್ಯವಾಗುತ್ತದೆ. ಅವುಗಳಲ್ಲಿ ಕೆಲವು ವಿಷಯಾಧಾರಿತವಾಗಿರಬಹುದು ಮತ್ತು ಕೆಲವು ಸಹಜವಾದು-ದಾಗಿರಬಹುದು. ಅವು ಸ್ಥಳೀಯ ಗಿಡಗಳು, ಪ್ರಾಣಿಗಳು, ಅವರು ತಮ್ಮ ಸುತ್ತಮುತ್ತ ನೋಡುವ ಉಪಕರಣಗಳು, ಅವರು ಸಂಜೆ ಯಾವ ಆಟ ಆಡಲು ಇಚ್ಛಿಸುತ್ತಾರೆ, ಕೆಲವು ತಿನಿಸುಗಳನ್ನು ಹೇಗೆ ತಯಾರಿಸುತ್ತಾರೆ ಮುಂತಾದವುಗಳನ್ನು ಒಳಗೊಂಡಿರಬಹುದು.

ಈ ಚರ್ಚೆಗಳಲ್ಲಿ, ಮಕ್ಕಳು ತಮ್ಮನ್ನು ತಾವು ಮುಕ್ತವಾಗಿ ಅಭಿವ್ಯಕ್ತಿಗೊಳಿಸಲು ತಮ್ಮ ಮಾತೃಭಾಷೆಯನ್ನೇ ಬಳಸಲು ಪ್ರೋತ್ಸಾಹಿಸಬೇಕು. ಏಕೆಂದರೆ ಅವರು ವಿಮರ್ಶಾತ್ಮಕವಾಗಿ ಯೋಚಿಸಲು ಮತ್ತು ತಮ್ಮ ಚಿಂತನೆಗಳನ್ನು ತಾರ್ಕಿಕವಾಗಿ ಮಂಡಿಸಲು ಕಲಿಯಬೇಕಿರುವುದು ಮುಖ್ಯ. ತಮ್ಮ ಮಾತೃ-ಭಾಷೆಯಲ್ಲಿ ಮಾತನಾಡಲು ಅವರಿಗೆ ಸ್ವಾತಂತ್ರ್ಯವಿದ್ದರೆ, ಇದು ಅವರಿಗೆ ಮತ್ತಷ್ಟು ಸುಲಭವಾಗುತ್ತದೆ.


ವರ್ಣಮಾಲೆಯ ಪಠ್ಯಕ್ರಮಗಳಲ್ಲಿ ಧ್ವನಿ ಚಿಹ್ನೆ ಘಟಕಗಳ ನಡುವೆ ಇರುವ ಸಂಬಂಧವು ಹೆಚ್ಚು ಕಡಿಮೆ ಸುಸಂಬದ್ಧವಾಗಿಯೇ ಇದೆ.

ಬಹುಭಾಷಿಕ ಭಾರತದಲ್ಲಿ ಸಾಕ್ಷರತೆ: ರೂಮ್ ಟು ರೀಡ್‌ನ ಅನುಭವಗಳು

ಮಧ್ಯಪ್ರದೇಶದ ಬರ್ವಾನಿ ಮತ್ತು ರಾಜಸ್ತಾನದ ಸಿರೋಹಿ ಎಂಬ ಎರಡು ಜಿಲ್ಲೆಗಳಲ್ಲಿ ರೂಮ್ ಟು ರೀಡ್ (RTR) ಎಂಬ ಒಂದು ಸಂಯೋಜಿತ ಬಹುಭಾಷಿಕ ಕಲಿಕಾ ಯೋಜನೆಯನ್ನು ಜಾರಿಗೆ ತರಲಾಯಿತು. ಇವೆರಡೂ ಪ್ರದೇಶಗಳಲ್ಲಿ ಒಂದು ವಿಸ್ತೃತ ಸಮಾಜೋ-ಭಾಷಿಕ ಸಮೀಕ್ಷೆಯ ಮೂಲಕ ಈ ಪ್ರಕ್ರಿಯೆಯು ಆರಂಭವಾಯಿತು. ಬಳಿಕ ಈ ಸಮೀಕ್ಷೆಯ ದತ್ತಾಂಶಗಳನ್ನು ವಿಶ್ಲೇಷಿಸಿ ಕಾರ್ಯಕ್ಷೇತ್ರದಲ್ಲಿ ಅದರ ಜಾರಿಗೆ ತಿಳಿಸಲಾಯಿತು. ಈ ಯೋಜನೆಗೆ ಸಾಕ್ಷರತೆಯ ಪ್ರಮುಖ ಮೂರು ಆಧಾರಸ್ತಂಭಗಳ ಜೊತೆಗೆ, ಬಹುಭಾಷಿಕ ಪರಿಕರಗಳ ಸೃಷ್ಟಿ ಮತ್ತು ಮಗುವಿನ ಭಾಷೆಯ ಬಳಕೆಗೆ ಹೆಚ್ಚುವರಿಯಾಗಿ ಗಮನಹರಿಸಲಾಯಿತು. ಶಾಲಾ ವ್ಯವಸ್ಥೆಯು ಒಂದು ಪ್ರಭಾವಿ ಭಾಷೆಗೆ ಹೆಚ್ಚು ಮಹತ್ವ ಕೊಡುತ್ತಿದ್ದರೂ, ಯಾವುದೇ 'ಒಂದು' ಭಾಷೆಗೆ ಜೋತು ಬೀಳದಂತೆ ಎಚ್ಚರಿಕೆಯಿಂದ ಹೆಜ್ಜೆಯಿರಿಸಲಾಗಿತ್ತು. ಮೌಖಿಕ ಅಥವಾ ಪಠ್ಯಾಧಾರಿತ ಚಟುವಟಿಕೆಗಳಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಗರಿಷ್ಠ ಮಟ್ಟದಲ್ಲಿ ಸ್ಥಳೀಯ ಭಾಷೆಯನ್ನೇ ಬಳಸುವಂತೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು. ಸ್ಥಳೀಯ ಭಾಷೆಯಲ್ಲೇ ಧ್ವನಿಶಾಸ್ತ್ರೀಯ ಅರಿವು ಮೂಡಿಸುವ ಚಟುವಟಿಕೆ, ಕಥಾ ರಚನೆ, ಪದಗಳ ಪಟ್ಟಿ ಮತ್ತು ಪದ ಚಿತ್ರಗಳ ಕಾರ್ಡ್‌ಗಳನ್ನು ರಚಿಸಲಾಯಿತು. ಅಕ್ಷರಜ್ಞಾನದ ತರಗತಿಯ ಒಂದು ಅಗತ್ಯ ಅಂಶವಾಗಿ ಮಕ್ಕಳ ವೈವಿಧ್ಯಮಯ ಭಾಷಿಕ ಅನುಭವವನ್ನು ಬಳಸಿಕೊಳ್ಳಲಾಯಿತು.

ಉದಾಹರಣೆಗೆ ದೇವನಾಗರಿ ಲಿಪಿಯಲ್ಲಿ 'क' ಅಕ್ಷರದ ಧ್ವನಿಯು ಕಮಲ, ಆಕಳು, ಬೆನಕ ಮುಂತಾದ ಎಲ್ಲ ಪದಗಳಲ್ಲಿಯೂ /क/ ಎಂದೇ ಆಗಿರುತ್ತದೆ. ಆದರೆ ಇಂಗ್ಲಿಷ್‌ನಲ್ಲಿ ಹಾಗಲ್ಲ. 't' ಅಕ್ಷರವು 'station' ಇತ್ಯಾದಿಗಳಂತೆ ಒಂದೇ ಪದದಲ್ಲಿ ವಿವಿಧ ಧ್ವನಿಗಳನ್ನು ಸೂಚಿಸಬಹುದು. ಪದ ಬಳಕೆಯೂ ವಿಭಿನ್ನ ಧ್ವನಿಯಿಂದ ಕೂಡಿರಬಹುದು. ಆದರೆ ಅಕ್ಷರಗಳನ್ನು ಕಲಿಸುವುದು ಸುಲಭವೆಂದು ಇದರರ್ಥವಲ್ಲ. ಅಕ್ಷರ ಕೇಂದ್ರಿತ ಭಾಷೆಗಳಲ್ಲಿ ಒಂದು ವಿನ್ಯಾಸವಿದ್ದರೂ ಕೂಡ ಸುಮಾರು 400ಕ್ಕೂ ಹೆಚ್ಚು ಜೋಡಣೆಗಳು ಸಾಧ್ಯವಿದ್ದು ಮಕ್ಕಳು ಅವನ್ನು ಕ್ಷಣಮಾತ್ರದಲ್ಲಿಯೇ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಕೆಲವು ಬಾರಿ ಸನ್ನಿವೇಶಕ್ಕೆ ತಕ್ಕಂತೆ ಅಕ್ಷರಗಳ ಚಿಹ್ನೆಗಳು ಬದಲಾದೀತು. ಉದಾಹರಣೆಗೆ 'ಈ' ಎಂಬ ಅಕ್ಷರವು 'ಈಶ' ಎಂಬಲ್ಲಿ ಅಕ್ಷರವಾಗಿಯೂ, 'ನೀಲಿ' ಎಂಬಲ್ಲಿ ಸ್ವರವಾಗಿಯೂ ಸೇರಿದೆ. ಹಾಗೆಯೇ 'ತ' ಎಂಬ ಅಕ್ಷರವು ಅಗತ್ಯ ಎಂಬಲ್ಲಿ ಹಾಗೂ ಸ್ತ್ರೀ ಎಂಬಲ್ಲಿ ಬೇರೆ ಬೇರೆಯಾಗಿ ಇರುತ್ತದೆ. ಈ ಎಲ್ಲದರ ಅರಿವು ನಮ್ಮ ತರಗತಿಯ ಪದ್ಧತಿಗಳನ್ನು ಕೆಳಗಿನಂತೆ ರೂಪಿಸಲು ಸಹಾಯ ಮಾಡಿದೆ:

- ಇಡೀ ಘಟಕವನ್ನು ಪ್ರತ್ಯೇಕವಾಗಿ ಕಲಿಸಿದರೆ ಪ್ರಯೋಜನವೇನೂ ಇಲ್ಲ. ಅಕ್ಷರಮಾಲೆಯನ್ನು ಹೇಳಿಕೊಡುವಾಗ ಮಗುವು ಅಕ್ಷರಗಳ ಬಹುವಿಧದ




ಸಂಯೋಜನೆಗಳನ್ನು ವೈವಿಧ್ಯಮಯವಾದ ಒಂದು ಸಮೃದ್ಧ ಪಠ್ಯದಲ್ಲಿ ಬೇರೆಬೇರೆ ಪದಗಳ ಮೂಲಕ, ನೋಡುವಂತೆ ವಿನ್ಯಾಸಗೊಳಿಸಬೇಕು. ಹಾಗಾಗಿ ಎಲ್ಲಾ ಪ್ರಾಥಮಿಕ ತರಗತಿಗಳಲ್ಲಿ ಉತ್ತಮ ಗುಣಮಟ್ಟದ, ವಿಭಿನ್ನವಾದ ಸಾಹಿತ್ಯ ಅವಶ್ಯ ಇರಬೇಕು.

- ಅಕ್ಷರಗಳನ್ನು ಗಡಿಬಿಡಿಯಲ್ಲಿ ಹೇಳಿಕೊಡಬಾರದು – ಮೊದಲ ಕೆಲವು ತಿಂಗಳುಗಳ ಕಾಲ ಪೂರ್ಣ ಅಕ್ಷರಮಾಲೆಯನ್ನು ಕಲಿಸಿ ನಂತರ ಪದಗಳು ಮತ್ತು ವಾಕ್ಯಗಳನ್ನು ಓದುವುದನ್ನು ಕಲಿಸಬೇಕು. ಶಾಲಾ ದಿನಗಳ ಆರಂಭಿಕ ವರ್ಷಗಳಲ್ಲಿ ಲಿಪಿಯನ್ನು ಯೋಜನಾಬದ್ಧ ಮತ್ತು ರಚನಾತ್ಮಕ ರೀತಿಯಲ್ಲಿ ಕಲಿಸಬೇಕು. ಅಕ್ಷರಗಳನ್ನು ಸದಾ ವರ್ಣಮಾಲೆಯಲ್ಲಿರುವ ಸಾಂಪ್ರದಾಯಿಕ ಅನುಕ್ರಮ ರೀತಿಯಲ್ಲಿ ಹೇಳಿಕೊಡಬೇಕಾಗಿಲ್ಲ. ಅವುಗಳನ್ನು ಗುಂಪುಗಳನ್ನಾಗಿ ವಿಭಜಿಸಿ, ಅದರಲ್ಲಿನ ಅಕ್ಷರಗಳ ವಿವಿಧ ಸುಲಭ ಜೋಡಣೆಗಳನ್ನು ಓದಿ, ಬಿಡಿಸಲು ಸಹಾಯ ಮಾಡಬೇಕು. ಅವರಿಗೆ ಎಲ್ಲಾ ಅಕ್ಷರಗಳು ಕಲಿಸಿಲ್ಲದಿದ್ದರೂ ಈ ಮೂಲಕ ಅಕ್ಷರಗಳನ್ನು ಗುರುತಿಸಿಕೊಂಡು, ಅವುಗಳನ್ನು ಜೋಡಿಸಿ ಪದ ಮತ್ತು ವಾಕ್ಯಗಳನ್ನು ಓದಲು ಸಾಧ್ಯವಾಗಬೇಕು.

ಹದ್ದು ಒಂದು ನಾಣ್ಯವನ್ನು ಹುಡುಕಿ ತಂದಿತು. ರೈತನಿಗೆ ಕಾಣುವಂತೆ ಸ್ವಲ್ಪ ದೂರದಲ್ಲಿ ಬೀಳಿಸಿತು. ಅದೇನೆಂದು ನೋಡಲು ರೈತ ಎದ್ದು ಹೊರಗೆ ಬಂದನು. ಆಗ ಗೋಡೆ ಕುಸಿಯಿತು. ಅವನಿಗೆ ಹದ್ದು ಬೇಕೆಂದೇ ನಾಣ್ಯ ತಂದು ಹಾಕಿದ್ದು ಎಂದು ತಿಳಿಯಿತು. ತನ್ನ ಜೀವ ಉಳಿಸಿದ ಹದ್ದಿನ ಕಡೆಗೆ ಪ್ರೀತಿಯಿಂದ ನೋಡಿದನು. ಅದಕ್ಕೆ ಕೈ ಮುಗಿದನು. ಹದ್ದು ಹರ್ಷದಿಂದ ಮುಗಿಲ ಕಡೆಗೆ ಹಾರಿ ಹೋಯಿತು.

ಓದುವಿಕೆಯ ಐದು ಮುಖ್ಯ ಅಂಶಗಳು

ಪದಗಳ ಒಡೆಯುವಿಕೆಯಿಂದಾಗಿ ಮಗುವಿಗೆ ಸಂದರ್ಭವನ್ನು ಅರ್ಥೈಸಿಕೊಳ್ಳಲು ಮತ್ತು ಓದುವಿಕೆಯ ಅಭ್ಯಾಸದ ಅವಕಾಶಗಳು ಲಭಿಸುತ್ತವೆ. ಇದರಿಂದ ಅರ್ಥಗ್ರಹಿಕೆಯ ಜೊತೆಗೆ ಸುಲಲಿತ ಓದಿಗೆ ಸಹಾಯ ಮಾಡುತ್ತದೆ. ಜೊತೆಗೆ, ಐದು ಪ್ರಮುಖ ಅಂಶಗಳ ಮೇಲೆ ಗಮನವನ್ನು ಕೇಂದ್ರೀಕರಿಸುವುದರಿಂದ ಮಕ್ಕಳ ಓದಿನ ಕೌಶಲ ಉತ್ತಮವಾಗುತ್ತದೆಂದು ಅಂತಾರಾಷ್ಟ್ರೀಯ ಸಂಶೋಧನೆಗಳು ಹೇಳುತ್ತವೆ. ಆದ್ದರಿಂದ ಪರಿಣಾಮಕಾರಿ ಓದುವ ಸಾಮರ್ಥ್ಯಕ್ಕಾಗಿ,





ಈ ಎಲ್ಲಾ ಐದು ಅಂಶಗಳಿಗೆ ಒತ್ತು ಕೊಟ್ಟು ಪ್ರತಿದಿನದ ತರಗತಿ ನಿರ್ದೇಶನವನ್ನು ವಿನ್ಯಾಸಗೊಳಿಸುವಂತೆ ರೂಪಿಸುವುದು ಮುಖ್ಯ.

1. ಧ್ವನಿಶಾಸ್ತ್ರೀಯ ಅರಿವು

ಅಂದರೆ ಯಾವುದೇ ಮಾತನಾಡುವ ಪದದ ಧ್ವನಿಯ ರಚನೆಯನ್ನು ಅರ್ಥಮಾಡಿಕೊಳ್ಳುವುದು ಉದಾಹರಣೆಗೆ ಕಿತಾಬ್ ಪದದಲ್ಲಿ ಮೂರು ಧ್ವನಿಗಳಿವೆ– ಕಿ/ತಾ ಮತ್ತು ಬ್; ಮಹಕ್ ಪದದ ಮೊದಲ ಧ್ವನಿ ಮ ಇತ್ಯಾದಿ.

2. ಧ್ವನಿಗಳು

ಪದಗಳನ್ನು ಅರ್ಥೈಸಲು ಧ್ವನಿ ಚಿಹ್ನೆಗಳ ಸಂಬಂಧವನ್ನು ಬಳಸುವುದು: ಅಂದರೆ /ಕ/ ಎಂಬ ಧ್ವನಿಯನ್ನು 'ಕ' ಎಂದು ಬರೆಯುತ್ತೇವೆ. /ನೀ/ ಮತ್ತು /ಲಾ/ ಎಂಬ ಧ್ವನಿಗಳನ್ನು ಸೇರಿಸಿದಾಗ 'ನೀಲಾ' ಎಂದು ಬರೆಯುವ ಪದವು ದೊರೆಯುತ್ತದೆ.

3. ಶಬ್ದ ಸಂಪತ್ತು

ಇದು ಪದದ ಅರ್ಥದ ಜೊತೆಗಿನ ಅರಿವು. ಉದಾಹರಣೆಗೆ 'ಹರಿ' ಎಂಬ ಪದವು ಈ ಕೆಳಗಿನ ವಾಕ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದ್ದು ವಿವಿಧ ಅರ್ಥಗಳನ್ನು ನೀಡುತ್ತದೆ; ನದಿಯು ಹರಿಯುತ್ತದೆ. ಬಟ್ಟೆ ಹರಿದಿದೆ. ಅವನ ಹೆಸರು ಹರಿ ಹೀಗೆ. ಮಗು ವಿವಿಧ ಸನ್ನಿವೇಶಗಳಲ್ಲಿ ಸ್ವತಂತ್ರವಾಗಿ ಪದವನ್ನು ಬಳಸಲು ಶಕ್ಯವಾದಾಗ ಮಾತ್ರ ಒಂದು ಪದವು ಆ ಮಗುವಿನ ಪದಸಂಪತ್ತಿನ ಭಾಗವಾಗಿರುತ್ತದೆ.

4. ಸುಲಲಿತ ಓದು

ವೇಗವಾಗಿ, ಸ್ಫುಟವಾಗಿ ಮತ್ತು ಭಾವನೆಗಳೊಂದಿಗೆ ಓದುವ ಸಾಮರ್ಥ್ಯವನ್ನು ಸುಲಲಿತ ಎನ್ನಬಹುದು ಅಂದರೆ 'ಕಮಲ ಮಾರುಕಟ್ಟೆಗೆ ಹೋದಳು' ಎಂಬ ವಾಕ್ಯವನ್ನು ಒಂದೇ ಓದಿನಲ್ಲಿ ಓದುವುದು ಅದನ್ನು ಕ, ಮ, ಲ – ಕಮಲ; ಮಾ, ರು, ಕ, ಟ್ಟೆ, ಗೆ– ಮಾರುಕಟ್ಟೆಗೆ ಎಂದು ಬೇರೆಬೇರೆ ಧ್ವನಿಗಳಾಗಿ ಒಡೆದು ಓದಬಾರದು.

5. ಅರ್ಥಗ್ರಹಿಕೆ

ಕೊಟ್ಟಿರುವ ಒಂದು ಬರಹವನ್ನು ಅದರ ಅರ್ಥವನ್ನು ಕಟ್ಟಿಕೊಳ್ಳಲು ತಿಳಿಯುವುದೇ ಅರ್ಥಗ್ರಹಿಕೆ. ಅಂದರೆ ಬರಹದ ಪದಗಳ ಒಳಗಿರುವ ಸೂಕ್ಷ್ಮ ವಿವಿಧ ಅರ್ಥಗಳ ಸಾಧ್ಯತೆಯನ್ನು ಅರ್ಥ–ಮಾಡಿಕೊಳ್ಳುವುದು ಮತ್ತು ಅಷ್ಟೇ ಅಲ್ಲದೆ ಕೇವಲ ಅಲ್ಲಿಯ ಬರಹದ ಆಚೆಗೂ ಅರ್ಥವನ್ನು ಗ್ರಹಿಸುವುದು.

ಓದುವುದು ಮತ್ತು ಬರೆಯುವುದರ ನಡುವೆ ಪರಸ್ಪರ ಸಂಬಂಧವಿದೆ ಎಂಬುದನ್ನು ಅಗತ್ಯ ಗುರುತಿಸಬೇಕು. ಓದುವುದು ಒಂದು ಮಗುವಿನ ಬರಹವನ್ನು ಉತ್ತಮ ಪಡಿಸಿದರೆ, ಬರೆಯುವುದು ಓದುವುದನ್ನು ಗಟ್ಟಿಗೊಳಿಸುತ್ತದೆ. ಸ್ವತಂತ್ರ ಓದುಗ ಆಗಬೇಕಾದರೆ ಮಗುವು ಸ್ವತಂತ್ರವಾಗಿ ಬರೆಯುವವನೂ ಆಗಬೇಕು. ಹಾಗಾಗಿ ಮಗುವು ಒಂದು ಬರಹವನ್ನು ಓದಲು ಮತ್ತು ಅದರ ಭಾವನೆಗಳನ್ನು ಮಾತಿನಲ್ಲಿ ಮತ್ತು ಬರೆಯುವಲ್ಲಿ ಅಭಿವ್ಯಕ್ತಿಗೊಳಿಸಲು ಸಾಧ್ಯವಾಗುವಂತಹ ಚಟುವಟಿಕೆಗಳನ್ನು ತರಗತಿಯಲ್ಲಿ ವಿನ್ಯಾಸಗೊಳಿಸಬೇಕು. ಇದರಿಂದಾಗಿ ಆಳವಾದ ಗ್ರಹಿಕೆಯನ್ನು ಪಡೆದುಕೊಂಡು ಅರ್ಥ ಮಾಡಿಕೊಳ್ಳುವುದನ್ನು ಬೆಳೆಸಿಕೊಳ್ಳುತ್ತಾರೆ.

ಓದಿನ ಚಟುವಟಿಕೆಗಳು

ಮಗುವಿಗೆ ಓದುವಿಕೆಯನ್ನು ಕಲಿಯುವ ಪ್ರಕ್ರಿಯೆಯಲ್ಲಿ ಅರ್ಥ ಮತ್ತು ಆನಂದವನ್ನು ನೀಡಲು ಸಮಂಜಸವಾದ ಮಕ್ಕಳ ಸಾಹಿತ್ಯದ ಅನುಭವ ಹಾಗೂ ಶಾಲೆ, ಮನೆ ಮತ್ತು ಸಮುದಾಯಗಳಲ್ಲಿ ಓದಿನ ಸಂಸ್ಕೃತಿಯ ಬೆಳವಣಿಗೆಯು ಅತ್ಯಗತ್ಯ. ಶಾಲೆ ಮತ್ತು ತರಗತಿಯಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವ ಮೂಲಕ ಮತ್ತು ಪರಿಣಾಮಕಾರಿ ಓದುವಿಕೆಯ ಚಟುವಟಿಕೆಗಳನ್ನು ನೀಡುವ ಮೂಲಕ ಇದನ್ನು ಸಾಧ್ಯವಾಗಿಸಬಹುದು. ತರಗತಿ ಕೊಠಡಿಗಳು/ಗ್ರಂಥಾಲಯಗಳಲ್ಲಿ ಮಾಡಬಹುದಾದ ಕೆಲವು ಚಟುವಟಿಕೆಗಳೆಂದರೆ:

- ಜೋರಾಗಿ ಓದುವುದು: ಇದರಲ್ಲಿ ಶಿಕ್ಷಕರು ಒಂದು ಕಥೆಯನ್ನು ಮಕ್ಕಳಿಗೆ ಓದಿ ಹೇಳುತ್ತಾರೆ ಹಾಗೂ ಕಥೆ ಓದುವ ಮುನ್ನ, ಓದುತ್ತಿರುವಾಗ ಮತ್ತು ಓದಿ ಮುಗಿಸಿದ ನಂತರ ಮಕ್ಕಳ ಜೊತೆ ಸಂವಾದಗಳನ್ನು ಉತ್ತೇಜಿಸುತ್ತಾರೆ.
- ಹಂಚಿಕೊಂಡು ಓದುವುದು: ಇದರಲ್ಲಿ ಶಿಕ್ಷಕರು ಮತ್ತು ಮಕ್ಕಳು ಸುತ್ತಲೂ ಕುಳಿತು ಒಂದು ಬರಹವನ್ನು ಜೊತೆಯಾಗಿ ಓದುತ್ತಾರೆ. ಇದರಿಂದಾಗಿ ಮಕ್ಕಳು ನಿರ್ದಿಷ್ಟ ಪದಗಳನ್ನು ಹೇಗೆ ಓದುವುದು ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ ಮತ್ತು ಅವರಿಗೆ ಬೇಕಾದ ಅಭ್ಯಾಸವು ಸಿಗುತ್ತದೆ.
- ಜೋಡಿಗಳಾಗಿ ಓದುವುದು: ಇಬ್ಬರು ಮಕ್ಕಳ ಗುಂಪುಗಳನ್ನು ರಚಿಸಿ ಒಬ್ಬರಿಗೊಬ್ಬರು ಓದುವ ಅಭ್ಯಾಸದಲ್ಲಿ ನೆರವಾಗುವುದು.
- ಸ್ವತಂತ್ರವಾಗಿ ಓದುವುದು: ಇದರಲ್ಲಿ ಮಕ್ಕಳು ಸ್ವತಂತ್ರವಾಗಿ ತಮ್ಮ ಓದುವ ಮಟ್ಟಕ್ಕೆ ತಕ್ಕಂತೆ ಪುಸ್ತಕಗಳನ್ನು ಓದುವುದು.

ಓದುವ ಭಾರತ, ಬೃಹತ್ ಭಾರತ (Padhe Bharat, Badhe Bharat) ಕುರಿತಾಗಿ ಕೇಂದ್ರ ಸರ್ಕಾರದ ಇತ್ತೀಚೆಗಿನ ಮಾರ್ಗದರ್ಶನದಲ್ಲಿ, ಒಂದು ದಿನಕ್ಕೆ 150 ನಿಮಿಷಗಳ ಭಾಷಾ ಬೋಧನೆಯನ್ನೂ ಶಿಫಾರಸು ಮಾಡಿದೆ. ಮೊದಲ ಮತ್ತು ಎರಡನೆಯ ಭಾಷೆಯ ಬೋಧನೆ ಮತ್ತು ಕನಿಷ್ಠ 30 ನಿಮಿಷಗಳ ಸ್ವತಂತ್ರ ಓದುವ ಸಮಯ ಈ ಎರಡೂ ಇರಬೇಕು ಎಂದು ಕೂಡಾ ಹೇಳುತ್ತದೆ. ಈ ಸ್ವತಂತ್ರ ಓದುವ ಸಮಯ ಎಂದರೆ ಇದೊಂದು ಸುಖಸಾಧನವಲ್ಲ, ಬದಲಾಗಿ ಪ್ರಾಥಮಿಕ ಹಂತಗಳಲ್ಲಿ ನಡೆಯಬೇಕಾದ ಒಂದು ಕಡ್ಡಾಯ ಚಟುವಟಿಕೆ ಎಂಬುದನ್ನು ಅವಶ್ಯ ಗಮನಿಸಬೇಕು.

ಮಕ್ಕಳು ಸ್ವತಂತ್ರ ಓದುಗರಾಗುವುದು ಆ ಮೂಲಕ ಅವರನ್ನು ಸಬಲರಾಗಿ ಬದುಕಿನುದ್ದಕ್ಕೂ ಕಲಿಯುವವರನ್ನಾಗಿಸುವುದು ರೂಮ್ ಟು ರೀಡ್ ಸಂಸ್ಥೆಯ ದೀರ್ಘಕಾಲೀನ ದೃಷ್ಟಿಕೋನ. 2030ರ ಸುಮಾರಿಗೆ ಸರ್ವರಿಗೂ ಗುಣಮಟ್ಟದ ಶಿಕ್ಷಣದ ಸುಸ್ಥಿರ ಅಭಿವೃದ್ಧಿಯ ಗುರಿ (Sustainable Development Goal of Quality Educationto All by 2030) ಇದನ್ನೇ ಒಳಗೊಂಡಿದೆ. ಇದನ್ನು ಸಾಧಿಸಲು ಮಕ್ಕಳಿಗೆ ಮಾಹಿತಿಪೂರ್ಣವಾದ, ಸಂಶೋಧಿಸಲ್ಪಟ್ಟ, ಚೆನ್ನಾಗಿ ವಿನ್ಯಾಸ ಮಾಡಲ್ಪಟ್ಟ ಹಾಗೂ ಹಿಗ್ಗಿಸಬಹುದಾದ ಮತ್ತು ಸುಸ್ಥಿರವಾದ ಪ್ರಾಥಮಿಕ ಹಂತದ ಬೆಂಬಲಗಳನ್ನು ನೀಡಲು ನಮ್ಮ ಪರಿಶ್ರಮಗಳನ್ನು ಕೇಂದ್ರೀಕರಿಸಬೇಕಿದೆ. ಶೈಕ್ಷಣಿಕ ಕಲಿಕೆಗೆ ಓದುವುದು ಮೂಲಾಧಾರವೆಂದು ತಿಳಿದಿರುವಾಗ ಹಾಗೂ ಕಡಿಮೆ ಓದಿನ ಮಟ್ಟವಿದ್ದರೆ ಕಲಿಕೆ ಕುಂಠಿತ ಆಗುತ್ತದೆಯೆಂದು ತಿಳಿದಿರುವಾಗ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲ ಮಕ್ಕಳು ಸುಲಲಿತವಾಗಿ ಓದಿ ಅರ್ಥಗ್ರಹಿಕೆಯನ್ನು ಪಡೆಯುತ್ತಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದು ನಿಜವಾದ ಸವಾಲು.

I- Refers to the ability to identify patterns of specific letters as words, eventually leading to word recognition. It is when children gain this orthographic expertise that reading becomes an automatic process.



ಶಕ್ತಿಬ್ರತ ಸೇನ್ ಅವರು **ರೂಮ್ ಟು ರೀಡ್ ಇಂಡಿಯಾದ** ಯೋಜನಾ ನಿರ್ದೇಶಕರಾಗಿದ್ದಾರೆ. ಅಕ್ಷರಜ್ಞಾನ ಮತ್ತು ಹುಡುಗಿಯರ ಶಿಕ್ಷಣ ಯೋಜನೆ ಹಾಗು ಸಂಸ್ಥೆಯ ಆರ್ ಎಮ್ & ಇ ವಿಭಾಗವನ್ನು ನಿರ್ವಹಿಸುತ್ತಿದ್ದಾರೆ. ಅಕ್ಷರಜ್ಞಾನ ಯೋಜನೆಯು ಮಕ್ಕಳಲ್ಲಿ ಅಕ್ಷರ ಕೌಶಲವನ್ನು ಮತ್ತು ಓದುವ ಹವ್ಯಾಸವನ್ನು ಬೆಳೆಸಲು ಪ್ರಯತ್ನಿಸುತ್ತದೆ. ಹುಡುಗಿಯರ ಶಿಕ್ಷಣ ಯೋಜನೆಯು ಹುಡುಗಿಯರು ಪ್ರೌಢ ಶಿಕ್ಷಣವನ್ನು ಪೂರೈಸುವಂತೆ ಬೆಂಬಲಿಸುವುದು ಮತ್ತು ಹುಡುಗಿಯರ ಶಿಕ್ಷಣವನ್ನ ಸರ್ಕಾರದ ಮಟ್ಟದಲ್ಲಿ ಎತ್ತಿಹಿಡಿಯುವಲ್ಲಿ ಕೆಲಸ ಮಾಡುತ್ತದೆ. ದೊಡ್ಡಮಟ್ಟದಲ್ಲಿ ಗುಣಮಟ್ಟವನ್ನು ಕಾಪಾಡಿಕೊಳ್ಳಬಲ್ಲ ಯೋಜನೆಗಳ ವಿನ್ಯಾಸದಲ್ಲಿ ಶಕ್ತಿಬ್ರತರು ಪರಿಣತರು. ಭಾರತೀಯ ಭಾಷೆ ಮತ್ತು ಲಿಪಿಗೆ ಸಂಬಂಧಿಸಿ ಮಾಡಿರುವ ಕೆಲಸಕ್ಕೆ ಅವರು ಹೆಸರುವಾಸಿಯಾಗಿದ್ದಾರೆ. ಮಕ್ಕಳ ಸಾಹಿತ್ಯವನ್ನು ತರಗತಿ ಕೊಠಡಿಗೆ ತರುವಲ್ಲಿ ಅವರು ಬಹಳ ಉತ್ಸುಕರೂ, ಬದ್ಧತೆಯುಳ್ಳವರೂ ಆತ್ದು, ಹದಿಹರೆಯದವರೊಡನೆ ಮತ್ತು ಅವರ ಅಗತ್ಯಗಳೆಡೆಗೆ ಕೆಲಸ ಮಾಡುವುದು ಅವರಿಗೆ ಬಲು ಪ್ರಿಯ. ಅವರನ್ನು aktibrata.sen@roomtoread.org ಮೂಲಕ ಸಂಪರ್ಕಿಸಬಹುದು.



ನಿಧಿ ವಿನಾಯಕ್ ಅವರು **ರೂಮ್ ಟು ರೀಡ್ ಇಂಡಿಯಾದ** ಶಿಕ್ಷಣ ವಿನ್ಯಾಸ ಮತ್ತು ಶಿಕ್ಷಕರ ಬೆಂಬಲ ವಿಭಾಗದಲ್ಲಿ ಹಿರಿಯ ಅಧಿಕಾರಿಯಾಗಿದ್ದಾರೆ. ಅರ್ಥಶಾಸ್ತ್ರದಲ್ಲಿ ಅವರು ಡಾಕ್ಟರೇಟ್ ಪಡೆದಿದ್ದು ಕಳೆದ 15 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರಿ ಮತ್ತು ಇತರ ಸಂಸ್ಥೆಗಳೊಡನೆ ಮೊದಲ ತರಗತಿಗಳಲ್ಲಿ ಅಕ್ಷರ ಜ್ಞಾನ, ಶಿಕ್ಷಕರ ಬೆಂಬಲ ವ್ಯವಸ್ಥೆಗಳು ಮತ್ತು ಶಿಕ್ಷಕರ ತರಬೇತಿ ಕಾರ್ಯಕ್ರಮಗಳ ಗುಣಮಟ್ಟದ ವಿಷಯಗಳಲ್ಲಿ ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಶಿಕ್ಷಕರ ಶಿಕ್ಷಣದ ತರಬೇತಿಗೆ ಹಲವು ಕಾರ್ಯಕ್ರಮಗಳನ್ನು ರಚಿಸಿದ್ದು, ತರಗತಿಗೆ ಸಂಶೋಧನೆ ಆಧಾರಿತ ಗುಣಮಟ್ಟದ ಬೆಂಬಲಗಳನ್ನು ತರುವೆಡೆಗೆ ಉತ್ಸುಕರಾಗಿದ್ದಾರೆ. ಅವರನ್ನು nidhi.vinayak@roomtoread.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ದನ ಚನ್ನಗಿರಿ** । ಪರಿಶೀಲನೆ: **ಲತಾ ಕೆ ಸಿ**